ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :75 ಮಂಗಳವಾರ ಫೆ.6, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20



ಮಹಾ ಮಸ್ತಕಾಭಿಷೇಕ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರವಣಬೆಳಗೊಳದಲ್ಲಿ ಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಪೊಲೀಸರು ಬಂದೋಬಸ್‌ಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿದ್ದಾರೆ.

1.ಚಾರುಕೀರ್ತಿ ಭಟ್ಟಾರಕ ಶ್ರೀಗಳು ಸಿದ್ಧತಾ ಕಾರ್ಯಕ್ರಮದ ಪರಿಶೀಲನೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುತ್ತಿರುವುದು.

2.ಜೈನ ಮುನಿಗಳ ವೃಂದ ತ್ಯಾಗಿ ನಗರದಲ್ಲಿ ಬೀಡು ಬಿಟ್ಟಿದ್ದು, ಪ್ರವಚನ ನಡೆಸಿಕೊಡುತ್ತಿರುವುದು.

3.ಚಾವುಂಡರಾಯ ಮಂಟಪದೊಳಗೆ ಇರುವ ನಂದಾ ವೇದಿ ಜೈನ ಮಂಟಪದ ಒಂದು ನೋಟ.

ಮಸ್ತಕಾಭಿಷೇಕ : ಜೈನ ಕಾಶಿ ಬೆಳಗೊಳ ಸಜ್ಜು



ಶ್ರವಣಬೆಳಗೊಳ : ಈ ಸಹಸ್ರಮಾನದ ಎರಡನೇ ಮಹಾ ಮಸ್ತಕಾಭಿಷೇಕಕ್ಕೆ ಶ್ರವಣಬೆಳಗೊಳ ಬಹುತೇಕ ಸಜ್ಜಾಗಿದೆ.

ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮಹಾ ಮಸ್ತಕಾಭಿಷೇಕಕ್ಕೆ ಸಂಬಂಧಿಸಿದಂತೆ ಈಗಾಗಲೇ ಪೂರ್ವ ತಯಾರಿಗಳು ನಡೆದಿವೆ. ವಿವಿಧ ಕಾಮಗಾರಿಗಳು ಅಂತಿಮ ಹಂತಕ್ಕೆ ಬಂದಿವೆ. ಇನ್ನೆರಡು ದಿನದಲ್ಲಿ ಉಪ ನಗರ ಕಾಮಗಾರಿ ಸೇರಿದಂತೆ ಎಲ್ಲಾ ಕಾಮಗಾರಿಗಳೂ ಪೂರ್ಣಗೊಳ್ಳಲಿವೆ.

ಈ ಮಸ್ತಕಾಭಿಷೇಕದಲ್ಲಿ 60 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ರಾಜ್ಯ, ದೇಶ, ವಿದೇಶಗಳಿಂದಲೂ ಭಕ್ತರು ಆಗಮಿಸಲಿದ್ದಾರೆ. ಅವರಿಗೆ ಊಟ, ವಸತಿ, ಕುಡಿಯುವ ನೀರು ಇನ್ನಿತರೆ ಸೌಕರ್ಯ ಒದಗಿಸಲು ಎಲ್ಲಾ ಸಿದ್ಧತೆಗಳನ್ನೂ ಕೈಗೊಳ್ಳಲಾಗಿದೆ.

ಪ್ರವಾಸಿಗರಿಗೆ ಕಿಂಚಿತ್ತೂ ತೊಂದರೆ ಯಾಗದಂತೆ ಈಗಾಗಲೇ ಎಲ್ಲಾ ಅಗತ್ಯ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈ ಅಪರೂಪದ ದೃಶ್ಯಾವಳಿಯನ್ನು ಕಣ್ತುಂಬಿಕೊಳ್ಳುವ ತವಕದಲ್ಲಿ ಭಕ್ತರು ಇದ್ದಾರೆ.

ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರ ಸಲಹೆ ಮೇರೆಗೆ ಹಲವಾರು ಅಧಿಕಾರಿಗಳು ಮತ್ತು ನೌಕರರು ಕೆಲಸದಲ್ಲಿ ತೊಡಗಿದ್ದಾರೆ.

ಮಹಾ ಮಸ್ತಕಾಭಿಷೇಕದ ವಿಶೇಷಾಧಿಕಾರಿ ರಾಕೇಶ್ ಸಿಂಗ್ ಅವರು ಹಲವು ಸುತ್ತಿನ ಸಭೆ ನಡೆಸಿದ್ದಾರೆ. ಈಗಾಗಲೇ ಹತ್ತಾರು ಜೈನ ಮುನಿಗಳು ಪುರ ಪ್ರವೇಶ ಮಾಡಿದ್ದಾರೆ. ಮುನಿ ವೃಂದ ಹಾಗೂ ವಿವಿಧ ಕಲಾತಂಡಗಳು ತ್ಯಾಗಿ ನಗರದಲ್ಲಿ ವಿಶೇಷ ಮೆರವಣಿಗೆ ಕೂಡ ನಡೆಸಿವೆ.

ಮಹಾ ಮಸ್ತಕಾಭಿಷೇಕ ಹಿನ್ನೆಲೆಯಲ್ಲಿ ವಿಶೇಷವಾಗಿ ಅಲಂಕೃತಗೊಂಡಿರುವ ಶ್ರವಣಬೆಳಗೊಳದ ಚಾವುಂಡರಾಯ ಸಭಾ ಮಂಟಪವು ಸೋಮವಾರ ರಾತ್ರಿ ಕಂಗೊಳಿಸಿದ್ದು ಹೀಗೆ.

ಈ ಬಾರಿಯೂ ಡೋಲಿ ಸೇವೆ

ಶ್ರವಣಬೆಳಗೊಳದಲ್ಲಿ ಈ ಬಾರಿಯೂ ಡೋಲಿ ಸೇವೆ ನಡೆಯಲಿದೆ. ಡೋಲಿ ಹೊರುವ ಸ್ಥಳೀಯರು ಈಗಾಗಲೇ ಕಾರ್ಯಮಗ್ನರಾಗಿದ್ದಾರೆ. ಅಲ್ಲದೆ ಜಾರ್ಖಂಡ್‌ನಿಂದ ಕೂಡ 300 ಜನರು ಡೋಲಿ ಹೊರಲು ಇಲ್ಲಿಗೆ ಬಂದಿದ್ದಾರೆ.

ಡೋಲಿ ಹೊರುವ ಸ್ಥಳೀಯರು ಇದ್ದರೂ ಮಹೋತ್ಸವಕ್ಕೆ ಬರುವ ವೃದ್ಧರು, ಅಶಕ್ತರು, ಅಂಗವಿಕಲರ ಬೇಡಿಕೆ ಪೂರೈಸುವ ಸಲುವಾಗಿ ಜೈನ ಮಠ ಜಾರ್ಖಂಡ್‌ನ ಶಿಖರ್ಜಿಯಿಂದ 300 ಡೋಲಿವಾಲಾಗಳನ್ನು ಕರೆಸಿಕೊಂಡಿದೆ.

ವಿಂಧ್ಯಗಿರಿಯನ್ನು ಹತ್ತಿ ಬಾಹುಬಲಿಗೆ ನಡೆಯುವ ಮಹಾ ಮಸ್ತಕಾಭಿಷೇಕ ಕಣ್ತುಂಬಿಕೊಳ್ಳಲಾಗದವರನ್ನು ಹೊತ್ತೊಯ್ಯಲು ವಿಶೇಷವಾಗಿ ಪರಿಣಿತಿ ಪಡೆದಿರುವ ಇವರು, ಯಾತ್ರಾರ್ಥಿಗಳಿಗೆ ನೆರವಾಗಲಿದ್ದಾರೆ.

ಡೋಲಿ ಎಂದರೇನು : ವಯೋ ವೃದ್ಧರು, ಅಂಗವಿಕಲರು, ಅಸಹಾಯಕ ಭಕ್ತಾದಿಗಳಿಗಾಗಿ ಬಿದಿರಿನ ಬೊಂಬುಗಳಿಂದ ವಿಶೇಷವಾಗಿ ಸಿದ್ಧಪಡಿಸಲಾಗಿರುವ ಆಸನ ಇದಾಗಿದೆ. ಒಟ್ಟು 75 ಡೋಲಿ ಸಿದ್ಧಗೊಂಡಿದ್ದು, ಒಂದು ಡೋಲಿಯನ್ನು ನಾಲ್ವರು ಹೊತ್ತೊಯ್ಯುತ್ತಾರೆ.

ಬೆಟ್ಟ ಹತ್ತುವಾಗ ಕೈಯಲ್ಲಿ 5 ಅಡಿ ಬಿದಿರಿನ ಕೋಲನ್ನು ಊರುಗೋಲನ್ನಾಗಿ ಬಳಸುತ್ತಾರೆ. ಹೊತ್ತ ನಾಲ್ವರೂ ಒಂದೇ ವೇಗದಲ್ಲಿ ನಡೆಯಲಿದ್ದು, ಯಾತ್ರಾರ್ಥಿಗಳಿಗೆ ಆಯಾಸ, ತೊಂದರೆಯಾಗದಂತೆ ಕರೆದುಕೊಂಡು ಹೋಗಿ ಬರುತ್ತಾರೆ. ವಿಂಧ್ಯಗಿರಿ ಬೆಟ್ಟ ಭೂ ಮಟ್ಟದಿಂದ 470 ಅಡಿ ಮೇಲಿದ್ದು, ಬಾಹುಬಲಿ ಮೂರ್ತಿಯ ದರ್ಶನ ಮಾಡಲು 630 ಮೆಟ್ಟಿಲು ಹತ್ತಬೇಕು. ಈ ಬಾರಿ ಪುರಾತತ್ವ ಇಲಾಖೆಯು ಡೋಲಿ ಹೊರುವವರಿಗಾಗಿಯೇ ಪ್ರತ್ಯೇಕ ಮೆಟ್ಟಿಲು ನಿರ್ಮಿಸಿದೆ.

'ಭಕ್ತಾದಿಗಳನ್ನು ಬೆಟ್ಟದ ಮೇಲೆ ಹೊತ್ತೊಯ್ಯುವ ಕಾರ್ಯಕ್ಕೆ ಸಜ್ಜಾಗಿದ್ದೇವೆ. ಡೋಲಿಯಲ್ಲಿ ಕುಳಿತುಕೊಳ್ಳುವ ವ್ಯಕ್ತಿಯ ತೂಕದ ಆಧಾರದ ಮೇಲೆ ದರ ನಿಗದಿಪಡಿಸಲಾಗುತ್ತದೆ. ಶುಲ್ಕವನ್ನು ಸ್ಥಳೀಯ ಜೈನ ಮಠದ ಆಡಳಿತ ಮಂಡಳಿ ನಿರ್ಧರಿಸುತ್ತದೆ' ಎನ್ನುತ್ತಾರೆ ಜಾರ್ಖಂಡ್ ಡೋಲಿವಾಲಾ ಮನೋಜ್.

ಬಿಗಿ ಬಂದೋಬಸ್ತ್ ವ್ಯವಸ್ಥೆ

ಶ್ರವಣಬೆಳಗೊಳ: ಜೈನಕಾಶಿ ಶ್ರವಣಬೆಳಗೊಳದಲ್ಲಿ ಫೆ.7ರಂದು ಜರುಗ ಮಹಾಮಸ್ತಕಾಭಿಷೇಕ ಮಹೋತ್ಸವ ಉದ್ಘಾಟನಾ ಸಮಾರಂಭಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹಾಗೂ ಗಣ್ಯರು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ಬಿಗಿ ಬಂದೋಬಸ್ತ್ ವ್ಯವಸ್ಥೆ ಬಗ್ಗೆ ಪೊಲೀಸ್ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ವಾಯುಸೇನೆಯಿಂದ ಪರೀಕ್ಷಾರ್ಥವಾಗಿ ಹೆಲಿಕಾಪ್ಟರ್ ಮೂಲಕ ಶ್ರವಣಬೆಳಗೊಳದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಗಿ ಬಂದೋಬಸ್ತ್ ಬಗ್ಗೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕಮಲ್ ಪಂಥ್ ಅವರು ವೀಕ್ಷಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಾಪುರ್‌ವಾಡ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜ್ಯೋತಿ ವೈದ್ಯನಾಥ್ ಮತ್ತಿತರರು ಇದ್ದರು.

ನಾಳೆ ಬೆಳಗೊಳಕ್ಕೆ ರಾಷ್ಟ್ರಪತಿ

ಈ ಬಾರಿ ಮಹಾ ಮಸ್ತಕಾಭಿಷೇಕದ ವೇಳೆ ಗಣ್ಯಾತಿ ಗಣ್ಯರೇ ಆಗಮಿಸಲಿದ್ದಾರೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಫೆ.7ರಂದು ಶ್ರವಣಬೆಳಗೊಳಕ್ಕೆ ಆಗಮಿಸಲಿದ್ದಾರೆ.

ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು, ಪ್ರಧಾನಿ ನರೇಂದ್ರ ಮೋದಿ ಕೂಡ ಆಗಮಿಸುವ ನಿರೀಕ್ಷೆ ಇದೆ. ಇದಕ್ಕಾಗಿ ಈಗಾಗಲೇ ಬಂದೋಬಸ್ತ್ ಕಾರ್ಯ ನಡೆದಿದೆ.

ಮಹಾ ಮಸ್ತಕಾಭಿಷೇಕವನ್ನು ತಮ್ಮ ಒಬ್ಬರಿಂದ ಅಲ್ಲ, ಎಲ್ಲಾ ಭಕ್ತರೂ ಸೇರಿ ಈ ಕಾರ್ಯಕ್ರಮ ನಡೆಸಬೇಕು ಎಂದು ಶ್ರವಣಬೆಳಗೊಳದ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದ್ದಾರೆ.

ನಾಳೆ ಮಸ್ತಕಾಭಿಷೇಕ ಮಹೋತ್ಸವ ಉದ್ಘಾಟನೆ

ಶ್ರವಣಬೆಳಗೊಳ: ಗೊಮ್ಮಟೇಶ್ವರ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ 88ನೇ ಮಹಾಮಸ್ತಕಾಭಿಷೇಕ ಮಹೋತ್ಸವ -2018ರ ಉದ್ಘಾಟನಾ ಸಮಾರಂಭವನ್ನು ಫೆ.7ರಂದು ಬುಧವಾರ ಬೆಳಿಗ್ಗೆ 10.45 ಗಂಟೆಗೆ ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಏರ್ಪಡಿಸಲಾಗಿದೆ.

ಶ್ರೀ 108 ವರ್ಧಮಾನ ಸಾಗರ ಮುನಿ ಮಹಾರಾಜರು ಹಾಗೂ ಇತರ ಆಚಾರ್ಯರುಗಳು ಮತ್ತು ತ್ಯಾಗಿಗಳು, ಎಸ್.ಡಿ.ಜೆ.ಎಂ.ಐ ಮ್ಯಾನೇಜಿಂಗ್ ಕಮಿಟಿ ಟ್ರಸ್ಟ್ ಅಧ್ಯಕ್ಷ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ಮಹಾಮಸ್ತಕಾಭಿಷೇಕ ಮಹೋತ್ಸವ-2018ರ ರಾಷ್ಟ್ರ ಮಟ್ಟದ ಸಮಿತಿ ಪರಮ ಸಂರಕ್ಷಕ, ಪದ್ಮವಿಭೂಷಣ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಪಾವನ ಸಾನಿಧ್ಯ ವಹಿಸಲಿರುವರು.

ರಾಷ್ಟ್ರಪತಿ ರಾಮನಾಥ ಕೋವಿಂದ್, ಕರ್ನಾಟಕ ರಾಜ್ಯಪಾಲ ವಜುಬಾಯಿ ವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಪ್ರಧಾನ ಮಂತ್ರಿ ಹಾಗೂ ಲೋಕಸಭಾ ಸದಸ್ಯ ಹೆಚ್.ಡಿ.ದೇವೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪಶು ಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಎ.ಮಂಜು, ಮಹಾ ಮಸ್ತಕಾಭಿಷೇಕ ಸಮಿತಿ ರಾಜ್ಯ ಮಟ್ಟದ ಸಮಿತಿ ಸಹ ಅಧ್ಯಕ್ಷ ಕೆ.ಅಭಯಚಂದ್ರ ಜೈನ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಬಿ.ಎಸ್.ಶ್ವೇತಾ ದೇವರಾಜ್, ಶಾಸಕರಾದ ಸಿ.ಎನ್.ಬಾಲಕೃಷ್ಣ, ಹೆಚ್.ಡಿ.ರೇವಣ್ಣ, ಹೆಚ್.ಕೆ. ಕುಮಾರಸ್ವಾಮಿ, ಹೆಚ್.ಎಸ್.ಪ್ರಕಾಶ್, ವೈ.ಎನ್.ರುದ್ರೇಶಗೌಡ, ಕೆ.ಎಂ. ಶಿವಲಿಂಗೇಗೌಡ, ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ ಇನ್ನಿತರ ಗಣ್ಯರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಡಿ.ಸಿ. ವರ್ಗಾವಣೆಗೆ ತೋರಿದ ತರಾತುರಿ ಜನಪರ ಕೆಲಸಕ್ಕೇಕಿಲ್ಲ?

ಹಾಸನ : ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರ ವರ್ಗಾವಣೆಗೆ ತೋರಿದ ಕಾಳಜಿ, ಆತುರ, ತೀವ್ರತೆಯನ್ನು ಜಿಲ್ಲೆಯ ಮುಖ್ಯ ಸಮಸ್ಯೆಗಳ ಬಗ್ಗೆ ಜಿಲ್ಲೆಯ ಕಾಂಗ್ರೆಸ್ ನಾಯಕರು, ವಿಶೇಷವಾಗಿ ಬಿ.ಶಿವರಾಂ ಅವರು ತೋರಿದ್ದರೆ ಈ ಹೊತ್ತಿಗೆ ಜಿಲ್ಲೆಯ ಚಿತ್ರಣವೇ ಬದಲಾಗಿ ಹೋಗಿರುತ್ತಿತ್ತು. ಶಿವರಾಂ ಅವರ ಹೆಸರೇ ಏಕೆಂದರೆ, ಹೆಚ್.ಸಿ.ಶ್ರೀಕಂಠಯ್ಯ, ಹೆಚ್.ಎನ್.ನಂಜೇಗೌಡ, ಜಿ.ಪುಟ್ಟಸ್ವಾಮಿಗೌಡ, ಹಾರನಹಳ್ಳಿ ರಾಮಸ್ವಾಮಿ ಅವರಂತಹ ಘಟಾನುಘಟಿ ನಾಯಕರು ತೀರಿಕೊಂಡ ಮೇಲೆ ತಾನೇ ನಾಯಕನೆಂದು ಶಿವರಾಂ ಬಿಂಬಿಸಿಕೊಂಡು ಬಂದವರು. ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ರೇವಣ್ಣನವರ ನಂತರ ಜಿಲ್ಲೆಯಲ್ಲಿ ಹೆಚ್ಚು ರಾಜಕೀಯ ಸ್ಥಾನಮಾನ ಅನುಭವಿಸಿದವರು ಅವರು. ದೀರ್ಘ ಕಾಲ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು. ಈ ಅಧ್ಯಕ್ಷ ಸ್ಥಾನ ತೆರವಾಗುವ ಮುನ್ನ ಕೆಪಿಸಿಸಿ ಉಪಾಧ್ಯಕ್ಷ ಸ್ಥಾನ ಗಿಟ್ಟಿಸಿಕೊಂಡವರು ; ಇದೆಲ್ಲಕ್ಕಿಂತ ಹೆಚ್ಚಾಗಿ ಹಿಂದಿನ ಗಂಡಸಿ ಕ್ಷೇತ್ರದಿಂದ ನಾಲ್ಕು ಬಾರಿ ವಿಧಾನಸಭಾ ಸದಸ್ಯರಾಗಿದ್ದವರು.

ಪುನರ್ ವಿಂಗಡಣೆ ನಂತರ ಗಂಡಸಿ ಕ್ಷೇತ್ರ ಕಳೆದು ಹೋದ ನಂತರ 2008ರಲ್ಲಿ ಹಾಸನ ವಿಧಾನಸಭಾ ಕ್ಷೇತ್ರದಿಂದ, 2009ರ ಲೋಕಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ, 2013ರಲ್ಲಿ ಅರಸೀಕೆರೆ ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದವರು ಬಿ.ಶಿವರಾಂ. ಜಿಲ್ಲೆಯ ಮೂಲೆ ಮೂಲೆಗಳ ಲಕ್ಷಾಂತರ ಮತದಾರರು ಅವರಿಗೆ ಮತ ನೀಡಿದ್ದಾರೆ. ಹಾಗಾಗಿ ಅವರ ಮೇಲೆ ಜಿಲ್ಲೆಯ ಜನರ ಋಣ ಇದೆ. ಹಾಗಾಗಿಯೇ ಜಿಲ್ಲೆಯ ಜನರು ಇವರಿಂದ ಸಹಜವಾಗಿಯೇ ಹೆಚ್ಚಿನದನ್ನು ನಿರೀಕ್ಷೆ ಮಾಡಿದ್ದರು. ಈ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿದ್ದೇನೆಯೇ ಎಂದು ಶಿವರಾಂ ಅವರು ಎಂದಾದರೂ ಆತ್ಮಾವಲೋಕನ ಮಾಡಿಕೊಂಡಿದ್ದಾರೆಯೇ?

ಜಿಲ್ಲೆಯ ತೆಂಗು ಬೆಳೆಗಾರರು, ವಿಶೇಷವಾಗಿ ಅರಸೀಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳ ಬೆಳೆಗಾರರು ಸತತ ಬರಗಾಲದ ಪರಿಣಾಮವಾಗಿ ಎಂತಹ ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಸ್ವತಃ ತೆಂಗು ಬೆಳೆಗಾರರೂ ಆಗಿರುವ ಶಿವರಾಂ ಅವರಿಗೆ ಬಿಡಿಸಿ ಹೇಳಬೇಕಾಗಿಲ್ಲ.

ತೆಂಗಿನ ಮರಗಳು ಸಂಪೂರ್ಣ ಒಣಗಿ ಹೋಗಿರುವುದರಿಂದ ಒಂದು ಲಕ್ಷ ಕಾಯಿ ಪಡೆಯುತ್ತಿದ್ದ ಕೆಲವು ಕುಟುಂಬಗಳಲ್ಲಿ ಇಂದು ಒಂದು ಸಾವಿರ ಕಾಯಿ ಪಡೆಯುವುದೂ ಕಷ್ಟ ಎಂಬ ಸ್ಥಿತಿ ಇದೆ ಎಂದರೆ, ಅಂತಹ ಬೆಳೆಗಾರರ ಪರಿಸ್ಥಿತಿ ಏನಾಗಿರಬೇಡ! ಅನೇಕ ತೆಂಗು ಬೆಳೆಗಾರರ ಮಕ್ಕಳು ಊರು ಬಿಟ್ಟು ಬೆಂಗಳೂರು ಸೇರಿದ್ದಾರೆ. ಇಂತಹ ದುಸ್ಥಿತಿಯಲ್ಲಿರುವ ತೆಂಗು ಬೆಳೆಗಾರರ ನಡುವೆ ಇರುವ ನಾಯಕರಿಗೆ ಕನಿಷ್ಠ ಮಾನವೀಯತೆ ಇದ್ದರೆ ನೆಮ್ಮದಿಯಾಗಿ ನಿದ್ದೆ ಮಾಡಲು ಸಾಧ್ಯವೇ ಇಲ್ಲ.

ಕಾಡಾನೆ ಸಮಸ್ಯೆ, ರೈಲ್ವೆ ಮೇಲು ಸೇತುವೆ ನಿರ್ಮಾಣ, ರೈತರ ಆತ್ಮಹತ್ಯೆ, ಹಾಸನದ ಸುತ್ತಮುತ್ತಲ ಕೆರೆಗಳಿಗೆ ನೀರು ತುಂಬಿಸುವುದು, ಹಳೇಬೀಡು-ಮಾದೀಹಳ್ಳಿ ಹೋಬಳಿ ಜನರ ನೀರಾವರಿ ಬೇಡಿಕೆ, ಮರಳಿನ ಸಮಸ್ಯೆ ಹೀಗೆ ನಾಗರಿಕರಲ್ಲದೆ ದಲಿತರು, ಕಾರ್ಮಿಕರು, ವಿದ್ಯಾರ್ಥಿಗಳು ಒಂದಿಲ್ಲೊಂದು ಕಾರಣಗಳಿಗೆ ಚಳವಳಿ ಮಾಡುತ್ತಲೇ ಇದ್ದಾರೆ. ಇಂತಹ ಯಾವ ಸಮಸ್ಯೆ ಬಗ್ಗೆಯೂ ಶಿವರಾಂ ಅವರಂತಹ ನಾಯಕರು ಧ್ವನಿ ಎತ್ತಿದ್ದು ಕಾಣಲಿಲ್ಲ. ಜಿಲ್ಲೆಯ ಕಾಂಗ್ರೆಸ್ ನಾಯಕರು ಮನಸ್ಸು ಮಾಡಿದ್ದರೆ 2004 ರಿಂದ 2014ರ ತನಕ ಇದ್ದ ಯುಪಿಎ ಸರ್ಕಾರದ ಅವಧಿಯಲ್ಲೇ ಹಾಸನದ ರೈಲ್ವೆ ಮೇಲು ಸೇತುವೆ ಮಾಡಿಸಬಹುದಿತ್ತು. ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ರೈಲ್ವೆ ಆಯವ್ಯಯದಲ್ಲಿ ಸೇರಿಸಿದ್ದರೂ ಕಾಮಗಾರಿ ಶುರುವಾಗುವ ಲಕ್ಷಣ ಕಾಣುತ್ತಿಲ್ಲ.

ಬಿ.ಶಿವರಾಂ ಅವರು ಹಾಸನ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತರಾದರೂ, ಅವರಿಗೆ ಓಟು ಮಾಡಿದ ಜನರ ಸಂಕಷ್ಟಗಳಿಗೆ ಸ್ಪಂದಿಸಬೇಕಲ್ಲವೇ? ಇಲ್ಲಿ ಗೆಲ್ಲಲಿಲ್ಲವೆಂದ ಮೇಲೆ ಲೋಕಸಭೆ ಆಯಿತು, ಈಗ ಅದನ್ನು ಬಿಟ್ಟು ಬೇಲೂರಿಗೆ ಹೊರಟಿದ್ದಾರೆಂದರೆ ಏನು ಹೇಳಬೇಕು? ನೀವು ಗೆಲ್ಲಿಸದಿದ್ದರೆ ನಿಮ್ಮ ಪರ ಕೆಲಸ ಮಾಡುವುದಿಲ್ಲ ಎಂಬ ಸಂದೇಶವೇ?

ಬೇಲೂರು ಕ್ಷೇತ್ರ : ದಳ(ಎಸ್)ನಿಂದ ಕೆ.ಎಸ್.ಲಿಂಗೇಶ್‌ಗೆ ಟಿಕೆಟ್ ಗ್ಯಾರೆಂಟಿ

ಬೇಲೂರು : ಬೇಲೂರು ವಿಧಾನ ಸಭಾ ಕ್ಷೇತ್ರಕ್ಕೆ ದಳ(ಎಸ್)ನಿಂದ ಕೆ.ಎಸ್.ಲಿಂಗೇಶ್‌ಗೆ ಟಿಕೆಟ್ ಸಿಗುವುದು ಬಹುತೇಕ ಖಾತ್ರಿಯಾಗಿದೆ.

ಈ ಹಿನ್ನೆಲೆಯಲ್ಲಿ ಲಿಂಗೇಶ್ ಅವರು ಕ್ಷೇತ್ರದಾದ್ಯಂತ ಪ್ರಚಾರ ನಡೆಸಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು ಕೂಡ ಟಿಕೆಟ್‌ಗೆ ಸಂಬಂಧಿಸಿದಂತೆ ಗ್ರೀನ್ ಸಿಗ್ನಲ್ ನೀಡಿದ್ದಾರೆ.

ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆಯೂ ಪಕ್ಷದ ವರಿಷ್ಠರು ಲಿಂಗೇಶ್ ಅವರನ್ನು ಪ್ರಶ್ನಿಸಿದ್ದಾರೆ. ಈ ಹಂತದಲ್ಲಿ ಲಿಂಗೇಶ್ ಅವರು, ನನ್ನಲ್ಲಿ ದೊಡ್ಡ ಪ್ರಮಾಣದ ಹಣವಿಲ್ಲ ಎಂದಾಗ, ಪ್ರಚಾರ ಆರಂಭಿಸಿ, ಮುಂದೆ ನೋಡೋಣ ಎಂದು ವರಿಷ್ಠರು ತಿಳಿಸಿದ್ದಾರೆ.

ಕಳೆದ ಬಾರಿಯ ಚುನಾವಣೆಯಲ್ಲಿ ಕೊನೆ ಗಳಿಗೆಯಲ್ಲಿ ಲಿಂಗೇಶ್ ಅವರಿಗೆ ಟಿಕೆಟ್ ನೀಡಲಾಗಿತ್ತು. ಆಗ ಅವರು ಪ್ರಚಾರ ಕೈಗೊಳ್ಳಲು ಅವಕಾಶ ಸಿಕ್ಕಿರಲಿಲ್ಲ.

ಈ ಬಾರಿ ಪಕ್ಷದ ವರಿಷ್ಠರು ಈಗಲೇ ಸೂಚನೆ ನೀಡಿರುವುದರಿಂದ ಪ್ರಚಾರಕ್ಕೆ ಹೆಚ್ಚು ಅವಕಾಶ ದೊರೆಯಲಿದೆ. ಲಿಂಗೇಶ್ ಅವರು ಗಂಭೀರ ಸ್ಪರ್ಧೆ ಒಡ್ಡುವುದಂತೂ ಗ್ಯಾರೆಂಟಿ.

ಶಾರ್ಟ್ ಸರ್ಕ್ಯೂಟ್ : 10 ಅಂಗಡಿ ಸುಟ್ಟು ಕರಕಲು

ಹಾಸನ : ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಸೋಮವಾರ ಬೆಳಗಿನ ಜಾವ ಅಂಗಡಿಯೊಂದರಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಕಾಣಿಸಿಕೊಂಡ ಪರಿಣಾಮ ಕ್ಷಣಾರ್ಧದಲ್ಲಿ 10 ಅಂಗಡಿಗಳಿಗೆ ಬೆಂಕಿ ಸುತ್ತುವರೆದು 6 ಲಕ್ಷ ರೂ.ಗೂ ಹೆಚ್ಚಿನ ಮೌಲ್ಯದ ವಸ್ತುಗಳು ಸುಟ್ಟುಕರಕಲಾಗಿವೆ.

ಮೊದಲು ಕಟ್ಟಿನಕೆರೆ ಮಾರುಕಟ್ಟೆಯಲ್ಲಿರುವ ಕಾರ್ನರ್ ಅಂಗಡಿಯೊಂದಕ್ಕೆ ಬೆಂಕಿ ತಗುಲಿದ್ದು, ನಂತರ ಅಕ್ಕ ಪಕ್ಕದಲ್ಲಿದ್ದ ಸುಮಾರು 10 ಅಂಗಡಿಗಳಿಗೆ ಬೆಂಕಿ ಆವರಿಸಿದೆ. ಈ ವೇಳೆ ಅಲ್ಲಿದ್ದ ಕಾವಲುಗಾರ ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದಾನೆ. ಅಗ್ನಿಶಾಮಕ ದಳದವರು ಸ್ಥಳಕ್ಕೆ ಬಂದು ಬೆಂಕಿಯನ್ನು ನಿಯಂತ್ರಿಸಿ ಹೆಚ್ಚಿನ ಅಪಾಯವನ್ನು ತಪ್ಪಿಸಿದ್ದಾರೆ. ಅಷ್ಟರೊಳಗೆ ಅನೇಕ ಅಂಗಡಿಗಳ ವಸ್ತುಗಳೆಲ್ಲಾ ಸುಟ್ಟುಕರಕಲಾಗಿದ್ದವು.

ಕಟ್ಟಿನಕೆರೆ ಮಾರುಕಟ್ಟೆ ಮಧ್ಯೆ ಇರುವ ಹೆಚ್.ಎನ್.ಪ್ರಾವಿಜನ್ ಸ್ಟೋರ್ ಮಾಲೀಕ ಇಲಿಯಾಸ್ ಅವರ ಎರಡು ಅಂಗಡಿಯಲ್ಲಿದ್ದ ಟೇಬಲ್, ಒಣ ಮೆಣಸಿನಕಾಯಿ ಸೇರಿದಂತೆ ದಿನಸಿ ವಸ್ತುಗಳು ಬಹುತೇಕ ಸುಟ್ಟುಹೋಗಿವೆ. ಒಟ್ಟು 2 ಲಕ್ಷ ರೂ.ಗೂ ಹೆಚ್ಚಿನ ವಸ್ತುಗಳು ನಾಶವಾಗಿವೆ ಎಂದು ಅವರು ತಿಳಿಸಿದ್ದಾರೆ. ಇದರ ಪಕ್ಕವೇ ಇರುವ ನಾರಾಯಣಸ್ವಾಮಿ ಅವರ ಕುಂಕುಮದ ಅಂಗಡಿಯಲ್ಲಿದ್ದ ಸುಮಾರು 50 ಸಾವಿರ ರೂ. ಮೌಲ್ಯದ ವಸ್ತುಗಳು ಸುಟ್ಟುಹೋಗಿವೆ. *(-ಪುಟ 4ಕ್ಕೆ)*

ನಗರೋತ್ಥಾನ 3 ಯೋಜನೆ ಅನುಷ್ಠಾನಕ್ಕೆ ಪ್ರಕ್ರಿಯೆ

☐ 80 ಅಡಿ ರಸ್ತೆ ಅಭಿವೃದ್ಧಿಗೆ ಶೀಘ್ರದಲ್ಲೇ ಟೆಂಡರ್

☐ ಹಲವು ಬಡಾವಣೆಗಳಿಗೆ ರಸ್ತೆ, ಚರಂಡಿ ಸೌಲಭ್ಯ

ಹಾಸನ : ನಗರದ ಹಲವು ದಿನಗಳ ಕನಸಾದ ಎ.ಪಿ.ಎಂ.ಸಿ.ಯಿಂದ ಹಬೀಬಿಯಾ ಸಾಮಿಲ್, ಹುಣಸಿನಕೆರೆ ಮೂಲಕ ವರ್ತುಲ ರಸ್ತೆ ಸೇರುವ 3.15 ಕಿ.ಮೀ. ಉದ್ದದ 80 ಅಡಿ ರಸ್ತೆಯನ್ನು 7.55 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡುವ ಕಾಮಗಾರಿಗೆ ಸರ್ಕಾರದಿಂದ ಒಪ್ಪಿಗೆ ದೊರೆತಿದ್ದು, ಜಿಲ್ಲಾ ನಗರಾಭಿವೃದ್ಧಿ ಕೋಶವು ಅತಿ ಶೀಘ್ರದಲ್ಲಿ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಿದೆ.

ಹಾಸನ ನಗರದ ಬಹುಪಾಲು ಜನರು ವಾಸಿಸುವ, ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ಪಶ್ಚಿಮ ಭಾಗದ ಹಿಂದುಳಿದ ಪ್ರದೇಶಗಳ ಜನರ ಪಾಲಿಗೆ ದಕ್ಷಿಣ-ಉತ್ತರವಾಗಿ ಸಾಗುವ ಈ ರಸ್ತೆ ಅತ್ಯಂತ ಮಹತ್ವದ್ದೆನಿಸಲಿದೆ. ಬಿ.ಎಂ.ರಸ್ತೆ ಹಾಗೂ ವರ್ತುಲ ರಸ್ತೆಯನ್ನು ಸಂಪರ್ಕಿಸುವ ಈ ರಸ್ತೆ ನಗರದ ಬಹುಪಾಲು ಜನರ ಉಪಯೋಗಕ್ಕೆ ಬರಲಿದೆ. ಈ ರಸ್ತೆಗೆ ಅಬ್ದುಲ್ ಕಲಾಂ ರಸ್ತೆ ಎಂದು ಹೆಸರಿಡಬೇಕೆಂಬುದು ಹಲವು ನಾಗರಿಕರ ಆಶಯವಾಗಿದೆ.

ಚರಂಡಿ ಅಭಿವೃದ್ಧಿಗೆ 1.55 ಕೋಟಿ ರೂ.

ಕುವೆಂಪು ನಗರದ ದೊಡ್ಡ ಚರಂಡಿ ಅಭಿವೃದ್ಧಿಗೆ 1 ಕೋಟಿ ರೂ. ಹಾಗೂ 23ನೇ ವಾರ್ಡ್‌ನ ಒಂದು ಚರಂಡಿ ನಿರ್ಮಾಣಕ್ಕೆ 1.55 ಕೋಟಿ ರೂ. ಕಾಮಗಾರಿಗೂ ಟೆಂಡರ್ ಆಹ್ವಾನಿಸಲು ಸಿದ್ಧತೆ ನಡೆದಿದೆ.

ನಗರದ 2,16,17,31,33,34,35ನೇ ವಾರ್ಡ್‌ಗಳ ಎಸ್.ಸಿ. ಬಡಾವಣೆಗಳ ರಸ್ತೆ ಹಾಗೂ ಚರಂಡಿಗಳನ್ನು 5.10 ಕೋಟಿ ರೂ.ನಲ್ಲಿ ಹಾಗೂ 23,32 ಹಾಗೂ 34ನೇ ವಾರ್ಡ್‌ನಲ್ಲಿ ಎಸ್.ಟಿ. ಸಮುದಾಯಗಳು ವಾಸಿಸುವ ಬಡಾವಣೆಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 2.06 ಕೋಟಿ ರೂ.ಗಳ ಕಾಮಗಾರಿಗೂ ಕೂಡ ಒಂದೆರಡು ದಿನಗಳಲ್ಲಿ ಟೆಂಡರ್ ಆಹ್ವಾನಿಸುವ ಸಾಧ್ಯತೆ ಇದೆ.

'ಸಾಹಿತ್ಯ ಸಮ್ಮೇಳನಕ್ಕೊಂದು ಕಪ್ಪು ಚುಕ್ಕೆ'

ಹಾಸನ : ಜಿಲ್ಲೆಯಲ್ಲಿ ಮೂರು ದಿನಗಳ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಇದೀಗ ತೆರೆ ಬಿದ್ದಿದೆಯಾದರೂ 'ಹಾ.ರಾ.ನಾಗರಾಜ್ ' ದ್ವಾರಫಲಕದ ಬಗ್ಗೆ ಜಿಲ್ಲೆಯ ಬಹಳಷ್ಟು ಸಾಹಿತಿಗಳು ಆಕ್ಷೇಪಿಸಿದ್ದಾರೆ. ಸಮ್ಮೇಳನಕ್ಕೆ ಇದೊಂದು ಕಪ್ಪು ಚುಕ್ಕೆ ಎಂದು ದೂರಿದ್ದಾರೆ.

'ಜನತಾಮಾಧ್ಯಮ' ಪತ್ರಿಕಾ ಕಛೇರಿಗೆ ಆಗಮಿಸಿದ್ದ ಕೆಲವು ಸೂಕ್ಷ್ಮ ಮನಸ್ಸಿನ ಸಾಹಿತಿಗಳು, ಸಾಹಿತ್ಯ ವಲಯಕ್ಕೆ ಸೂಕ್ಷ್ಮತೆ ಇರಬೇಕು. ಕನ್ನಡ ನಾಡು-ನುಡಿಗಾಗಿ ಶ್ರಮಿಸಿ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಗಣ್ಯಾತೀ ಗಣ್ಯರ ಹೆಸರುಗಳನ್ನು ಮಾತ್ರ ದ್ವಾರಫಲಕಕ್ಕೆ ಬಳಸಬೇಕು ಎಂದು ಸಲಹೆ ನೀಡಿದರು.

ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿ ಹಾಗೂ ಮೇರು ವ್ಯಕ್ತಿತ್ವದ ಹೆಸರುಗಳು ಸಮ್ಮೇಳನಗಳಲ್ಲಿ ಬಳಕೆಯಾದರೆ ಮಾತ್ರ ಅದು ಅರ್ಥಪೂರ್ಣ. ಈ ಬಗ್ಗೆ ಕ.ಸಾ.ಪ. ಜಿಲ್ಲಾಧ್ಯಕ್ಷ ನಾಯಕರಹಳ್ಳಿ ಮಂಜೇಗೌಡರ ಗಮನಕ್ಕೂ ಕೂಡ ತರಲಾಗಿತ್ತಾದರೂ ಬದಲಾವಣೆ ಮಾಡುವುದಾಗಿ ಭರವಸೆ ನೀಡಿದ್ದ ಅವರು, ಕೊನೆ ಗಳಿಗೆಯವರೆಗೂ ಈಡೇರಿಸಲೇ ಇಲ್ಲ ಎಂದು ಕೆಲವು ಬರಹಗಾರರು ದೂರಿದರು.

ಹಿರಿಯರು ನೀಡಿದ ಮಾರ್ಗದರ್ಶನ ಕೈ ಬಿಟ್ಟ ಕ.ಸಾ.ಪ. ಪದಾಧಿಕಾರಿಗಳು, ಯಾವುದನ್ನು ಮಾಡಬೇಕು ಅಥವಾ ಬೇಡ ಎಂಬ ಕನಿಷ್ಠ ಪ್ರಜ್ಞೆ ಮರೆತಿದ್ದಾರೆ. ಜಿಲ್ಲಾಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಮತ್ತು ತಂಡಕ್ಕೆ ಬುದ್ಧಿ ಹೇಳಲು ಅಸಾಧ್ಯ ಎಂದು ಮನವರಿಕೆ ಆದಂತಾಗಿದೆ ಎಂದು ಆರೋಪಿಸಿದರು.

ಬೇಜವಾಬ್ದಾರಿಯಿಂದ ನಡೆದುಕೊಂಡಿರುವುದು ಸಾಹಿತ್ಯ ಪರಿಷತ್‌ಗೆ ಅವಮಾನ ಎಂದು ಟೀಕಿಸಿರುವ ಸಾಹಿತಿಗಳು, ಇದು ಅಕ್ಷಮ್ಯ ಅಪರಾಧ, ತಲೆ ತಗ್ಗಿಸುವಂತಾಗಿದೆ. ಇಡೀ ಸಮ್ಮೇಳನಕ್ಕೆ ಇದೊಂದು ಕಪ್ಪು ಚುಕ್ಕೆ ಎಂದು ವಿಷಾದಿಸಿದ್ದಾರೆ.

ಶ್ರೀ ಕ್ಷೇತ್ರ ಶ್ರವಣಬೆಳಗೊಳ

ಗೊಮ್ಮಟೇಶ್ವರ ಭಗವಾನ್ ಶ್ರೀ ಶ್ರೀ ಶ್ರೀ ಬಾಹುಬಲಿ ಸ್ವಾಮಿ
ಮಹಾಮಸ್ತಕಾಭಿಷೇಕ ಮಹೋತ್ಸವ-2018

ಕಾರ್ಯಕ್ರಮಗಳ ವಿಶೇಷ ಆಕರ್ಷಣೆ
ಪಂಚಕಲ್ಯಾಣ ನಗರ- ಚಾವುಂಡರಾಯ ಮಂಟಪ

06-02-2018	ಪಂಚನ ಆದಿಪುರಾಣದಂತೆ ಪಂಚಕಲ್ಯಾಣ ಮಹೋತ್ಸವ ಪೂರ್ವ ಸಿದ್ಧತೆ
07-02-2018	ಮಾನ್ಯ ರಾಷ್ಟ್ರಪತಿ ಅವರಿಂದ ಮಹಾಮಸ್ತಕಾಭಿಷೇಕ ಮಹೋತ್ಸವದ ಉದ್ಘಾಟನಾ ಸಮಾರಂಭ. ಸಂಜೆ ಪಂಚಕಲ್ಯಾಣ ಪ್ರಾರಂಭ. ಸಂದ್ಯಾವರ್ತ ರಾಜಮಹಲ್ ದರ್ಶನ.
08-02-2018	ಸಂಜೆ ಪಂಚಕಲ್ಯಾಣಗಳಲ್ಲಿ ದೇವೇಂದ್ರ ಸಭೆ, 16 ಸ್ವಪ್ನಗಳ ದರ್ಶನ.
09-02-2018	ಜನ್ಮಕಲ್ಯಾಣ ಮಹೋತ್ಸವ. ಗೊಮ್ಮಟ ನಗರದಿಂದ ಪಂಚ ಕಲ್ಯಾಣ ನಗರಕ್ಕೆ 12 ಸಾವಿರ ಮಂಗಲ ಕಲಶದೊಂದಿಗೆ ಮೆರವಣಿಗೆ ತಾತ್ಕಾಲಿಕವಾಗಿ ನಿರ್ಮಾಣವಾಗಿರುವ ಸುಮೇರು ಪರ್ವತದ ಪಾಂಡುಕ ಶಿಲೆಯ ಮೇಲೆ ಅಭಿಷೇಕ.
10-02-2018	ರಾಜ್ಯಾಭಿಷೇಕ ಕಾರ್ಯಕ್ರಮ, ಉಪರಾಷ್ಟ್ರಪತಿಗಳ ಆಗಮನ. ಸಂಜೆ: ದೀಕ್ಷಾ ಕಲ್ಯಾಣ. ಸಂಗೀತ ಕಾರ್ಯಕ್ರಮ.
11-02-2018	ಕೇವಲಜ್ಞಾನ ಕಲ್ಯಾಣ ಮತ್ತು ಸಮವಸರಣ ಪೂಜೆ ಆರಂಭ. ಜಿನವಾಣಿ ಶ್ರುತ ಪೂಜೆ.

11-02-2018 ರಿಂದ 16-02-2018 ರವರೆಗೆ ವಿವಿಧ ಆರಾಧನೆಗಳು ಮತ್ತು ಆಚಾರ್ಯಶ್ರೀ ಹಾಗೂ ಮಾತಾಜಿಯವರಿಂದ ಪ್ರವಚನ ನಡೆಯಲಿದೆ.

ಶ್ರೀಕ್ಷೇತ್ರ ಶ್ರವಣಬೆಳಗೊಳದ ಶ್ರೀಗಳವರ ನೇತೃತ್ವದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗ ಮತ್ತು ಸಹಕಾರದಿಂದ ಜರುಗಲಿರುವ ಮಹೋತ್ಸವ ಯಶಸ್ವಿಯಾಗಲು ಅನೇಕ ಯೋಜನೆಗಳ ಕಾರ್ಯಗತವಾಗುತ್ತಿವೆ.

ಪ್ರಕಟಣೆ: ಎಸ್‌ಡಿಜೆಎಂಐಎಂಸಿ ಟ್ರಸ್ಟ್ (ರಿ)- ಜಿಬಿಎಂಎಂಸಿ-2018. ಶ್ರೀಕ್ಷೇತ್ರ ಶ್ರವಣಬೆಳಗೊಳ.